ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ರಾಯಚೂರು
ಸಿ.ಸಿ.ನಂಬರು.380/2010
ಸಿಡೆಬ್ಲ್ಯೂ ನಂ-14 ಪಿಡೆಬ್ಲ್ಯೂ ನಂ-9
ಪ್ರಮಾಣೀಕರಿಸಿದ ದಿನಾಂಕಃ25-9-2014

| | |
|---|---|
| ಸಾಕ್ಷಿದಾರನ ಹೆಸರು | ಃಃ ಸರೋಜಮ್ಮಾ |
| ತಂದೆಃ ಗಂಡನ ಹೆಸರು | ಃಃ ಪ್ರಭಣ್ಣಾ |
| ವಯಸ್ಸು | ಃಃ 35ವರ್ಷ |
| ಉದ್ಯೋಗ | ಃಃ ಮನೆ ಕೆಲಸ |
| ವಿಳಾಸ | ಃಃ ರಾಯಚೂರು |
| ಮುಖ್ಯ ವಿಚಾರಣೆ | ಃಃ ಹಿ.ಸ.ಸ.ಅ. ಅವರಿಂದ |

ನನಗೆ ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯ ಇದೆ. ನನಗೆ ಸುಲೋಚನಾಳ ಪರಿಚಯ ಇದೆ. ನನಗೆ ಪಿರ್ಯಾದಿದಾರರ ಪರಿಚಯ ಇದೆ. ಅವರು ನಾಲ್ಕು ವರ್ಷಗಳ ಹಿಂದೇ ಚೀಟಿ ವ್ಯೆವಹಾರ ಮಾಡುತ್ತಿದ್ದರು. ನಾನು ಅವರ ಬಳಿ ಎರಡು ಚೀಟಿ ಹಾಕಿದ್ದೆ. 60 ಜನಾ ಸದಸ್ಯರು ಇದ್ದೇವು. ನಾನು 5,000/- ರೂ. ಗಳ ಎರಡುಚೀಟಿ ಹಾಕಿದ್ದೆ. ಆರೋಪಿ ಬಸ್ಸಮ್ಮಾಳ ಮನೆಯಲ್ಲಿ ಚಿಟಿ ಮಾಡಲಾಗುತ್ತಿತ್ತು. ಒಬ್ಬರು ಪ್ರತಿ ತಿಂಗಳು 5,000/- ರೂ. 1ನೇ ಆರೋಪಿ ಮನೆಯಲ್ಲಿ ಪ್ರತಿ ತಿಂಗಳ 10ನೇ ತಾರಿಕು ಚೀಟಿ ನಡೆಯುತಿತ್ತು. 1 ಮತ್ತು 2ನೇ ಆರೋಪಿಗಳು ಹಣ ಸಂಗ್ರಹಿಸುತ್ತಿದ್ದರು. 5,000/- ಕ್ಕೆ 10,000/- ರೂ. ಕೊಡುವುದಾಗಿ ಹೇಳಿದ್ದರು. ನನಗೆ 5,000/- ರೂ. ಬರಬೇಕಾಗಿದೆ. ನಂತರ ಆರೋಪಿಗಳ ಮನೆಬಳಿ ಹೋದಾಗ ಅವರು ಸಿಗಲಿಲ್ಲ ಆದುದ್ದರಿಂದ ಪಿರ್ಯಾದಿದಾರರು ಪೋಲಿಸರಿಗೆ ದೂರು ಕೊಟ್ಟಿದ್ದಾರೆ. ಪೋಲಿಸರು ತನಿಖೆ ಮಾಡಿ ನನ್ನ ಹೇಳಿಕೆ ಪಡೆದಿದ್ದಾರೆ. ದೂರು ಕೊಟ್ಟ ನಂತರ ಆರೋಪಿಗಳು ಸಿಕ್ಕಿದ್ದರು. ಆರೋಪಿಗಳು ನನಗೆ ರಶೀದಿಗಳನ್ನು ಕೊಟ್ಟಿದ್ದು ಅದು ನನ್ನ ಹೆಸರಿನಲ್ಲಿ ಇದ್ದು ಅದನ್ನು ನಾನು ಈ ದಿನಾ ನ್ಯಾಯಾಲಯದ ಮುಂದೆ ನೋಡುತಿದ್ದು ಅವುಗಳನ್ನು ನಿಪಿ.27 ಮತ್ತು ನಿಪಿ.28 ಎಂದು ಗುರುತಿಸಲಾಯಿತು.

ಪಾಟೀಸವಾಲುಃ1 ರಿಂದ 3ನೇ ಆರೋಪಿಪರ ಶ್ರೀ ಹೆಚ್. ಆರ್ ವಕೀಲರಿಂದಃ-

2ನೇ ಆರೋಪಿ ಅಂಚೆ ಕಚೇರಿಯಲ್ಲಿ ಆರ್ ಡಿ. ಮಾಡುತ್ತಿದ್ದರು ಎಂದರೆ ಸರಿ. ಬೆರೆ ವ್ಯೆವಹಾರ ಮಾಡತ್ತಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಚೀಟಿ ಹಾಕಿದ ಸಂಸ್ಥೆ ಹೆಸರು ಗೊತ್ತಿಲ್ಲ. ರಶೀದಿಗಳ ಸಂಖ್ಯೆ ಗೊತ್ತಿಲ್ಲ. ರಶೀದಿ ಮೇಲೆ ಯಾರ ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. 3ನೇ ಆರೋಪಿ ಹುಬ್ಬಳಿಯಲ್ಲಿ ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 2ನೇ ಆರೋಪಿ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1ನೇ ಆರೋಪಿಗೊ ಮತ್ತು ಅಂಗನವಾಡಿ ಕಾರ್ಯಕರ್ತೆ ಸುಲೋಚನಾ ನಡುವೆ

ಜಗಳಾಗಿತ್ತು ಎಂದರೆ ಗನನಗೆ ಗೊತ್ತಿಲ್ಲ. ಸುಲೋಚನಾ ಅವರ ಮೇಲೆ ದೂರು ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪೋಲಿಸರಿಗೆ ನಾನು ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ.27 ಮತ್ತು 28 ನ್ನು ನಾನೇ ಪೋಲಿಸರಿಗೆ ಕೊಟ್ಟಿದ್ದೇನೆಂದರೆ ಸರಿ. ನಿಪಿ.27 ಮತ್ತು 28 ನಾವೆ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ಚೀಟಿ ವ್ಯೆವಹಾರ ಮಾಡಿಲ್ಲಾ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ರಶೀದಿಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಪಾಟೀಸವಾಲುಃ4ನೇ ಆರೋಪಿಪರ ಶ್ರೀ ಆರ್ ಕೆ. ವಕೀಲರಿಂದಃ–**

4ನೇ ಆರೋಪಿ ನನಗೆ ದುಡ್ಡು ಕೊಡಬೇಕಾಗಿಲ್ಲಾ. ಆಕೇಯ ವಿರುದ್ದ ನಾನು ಪೋಲಿಸರ ಮುಂದೆ ದೂರು ಕೊಟ್ಟಿಲ್ಲ. ಆಕೇಯು ಚೀಟಿ ಹಾಕಿದ್ದಳು. ಅವಳು ದೂರು ಕೊಡಲು ಹೋಗಿದ್ದಳು ಎಂದರೆ ನನಗೆ ಗೊತ್ತಿಲ್ಲ. ಸುಲೋಚಮ್ಮಾ ನನಗೆ ಯಾವುದೇ ರಶೀದಿ ಬರೆದುಕೊಟ್ಟಿಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನೆ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿಕೊಂಡಿರುತ್ತಾರೆ.)

ಮುಖ್ಯ ನ್ಯಾಯಿಕ ದಂಡಾಧಿಕಾರಿ, ರಾಯಚೂರು.